ನಲವತ್ತೈದು ದಾಟಿತು. ತುಂಬಿದ ಕೂದಲನ್ನು ಮನೆಯಲ್ಲಿರುವಾಗ ಯಾವಾಗಲೂ ಮುಡಿಯಾಗಿ ಕಟ್ಟಿರುತ್ತಾಳೆ. ಸೊಂಟ ಸ್ವಲ್ಪ ತುಂಬಿಕೊಂಡರು ಮೈಕಟ್ಟಿನ್ನೂ ಆಕರ್ಷಕವಾಗೆ ಇದೆ. ಹೊಕ್ಕುಳಲ್ಲೇನೊ ಉಕ್ಕಿದಂತಾಗಿ ಅವಳನ್ನ ಹಿಂಬಾಲಿಸಿ ಹೋಗಿ ಭುಜಹಿಡಿದು ನಿಲ್ಲಿಸಿ ಅಪ್ಪಿ ಹಿಡಿದು ಮುತ್ತಿಕ್ಕಿದ್ದ. ಸ್ವೀಕರಿಸಿದವಳು, ‘ಯಾವುದಕ್ಕೆ ಈ ಸರ್‌ಪ್ರೈಸ್ ಕಂತು? ಮುಂದುವರಿಯುತ್ತದೆ ಅಂತ ಬ್ರಾಕೆಟ್ಟಿನಲ್ಲಿ ಇದೆಯ... ಇದ್ದರೆ ಅದೆಲ್ಲ ಆಮೇಲೆ’ ಅಂತ ಮುಗುಳ್ನಕ್ಕು ಮುಂದಿನ ಕೆಲಸಕ್ಕೆ ಹೋಗಿದ್ದು ಈಗಲೂ ತನಗೆ ನೆನಪಾಗುತ್ತದೆ. ಇಂತಹ ಮೈ ನವಿರೇಳಿಸುವ ಅದೆಷ್ಟು ಪ್ರಸಂಗಗಳು ತಮ್ಮಿಬ್ಬರ ನಡುವೆ ಇವೆ!

ಕುಳಿತಲ್ಲಿಂದ ಎದ್ದು ರೂಮಿಗೆ ಬಂದ. ನೆನಪುಗಳು ಮೂಡಿಸಿದ ಮುದ ಮುಖದಮೇಲೆ ಇನ್ನೂ ಉಳಿದಿತ್ತು. ಮಂಚದ ಮೇಲೆ ಅವಳೀಗ ಅರ್ಧ ಮಲಗಿದಂತೆ ಒರಗಿ ಕುಳಿತಿದ್ದಳು. ಶರೀರ ಇಳಿದುಹೋಗಿದೆ. ಚರ್ಮದ ಬಿಳಿಬಣ್ಣದಲ್ಲಿ ರಕ್ತಛಾಯೆಯಿಲ್ಲ. ಮುಖದಲ್ಲೀಗಲೂ ತನಗೆ ಕಾಣಸಿಗುವುದು ಅದೇ ಆತ್ಮವಿಶ್ವಾಸ ಮಾತ್ರ; ಮತ್ತೆಲ್ಲ ಗತಕಾಲಕ್ಕೆ. ಹೆಜ್ಜೆ ಸದ್ದಿಗೆ ಕಣ್ಣು ತೆರೆದವಳು ಹತ್ತಿರ ಕರೆದಳು. ‘ಇನ ಕಳಿಸಿದಾನೆ. ಅವನ ಗರ್ಲ್‌ಫ್ರೆಂಡ್ ಅಂತೆ. ಎಲಿಸಾ ಅಂತೆ ಹೆಸರು’ ಮೊಬೈಲನ್ನು ಇವನತ್ತ ಹಿಡಿದಳು. ಹೊಂಗೂದಲ ಹುಡುಗಿಯೊಬ್ಬಳು ನಗುತ್ತ ನಿಂತ ಫೋಟೊ. ಯುರೋಪಿಯನ್ ಚಹರೆ. ಮುಗುಳ್ನಗೆ ಅರಳಿಸಿರುವವಳ ಪಕ್ಕದಲ್ಲಿ ಅವಳಷ್ಟೆ ಎತ್ತರದ ತಮ್ಮ ಮಗ. ‘ಇಬ್ಬರು ಯಾವ್ದೋ ಖುಷಿಯಲ್ಲಿದ್ದಾರೆ’ ಅಂದ ಘನಶ್ಯಾಮ. ನಿಜಕ್ಕೂ ಅವನಿಗೆ ಸಂತೋಷವಾಗಿತ್ತು. ‘ನಾನೂ ಅದೇ ಅಂದ್ಕೊಂಡೆ. ಚಿಗುರು ಎಲೆಗಳೇ ಹಾಗೆ. ಆಕಾಶದ ವಿಸ್ತಾರವನ್ನೆಲ್ಲ ಹೀರುವ ಚೈತನ್ಯ ಅವಕ್ಕೆ’ ಅಂದಳು. ಮೊಬೈಲು ವಾಪಸು ಕೊಡುತ್ತ, ‘ಇನ್ನು ನಾಕುದಿನಕ್ಕೆ ಅಲ್ವ ತೋರಿಸಬೇಕಾದದ್ದು?’ ನೆನಪಿಸಿಕೊಂಡ. ಅಹಿತವೆನಿಸುತ್ತಿದ್ದರೂ ಮಾಡಲೇಬೇಕಾದದ್ದು. ‘ಬಿಡಿ, ಯಾವ ಪ್ರಯೋಜನಕ್ಕೆ? ನಂಗಂತೂ ನೆನಪಿಡೋಕೇ ಮನಸಿಲ್ಲ’ ಇವನ ಮುಖಭಾವ ನೋಡಿದವಳು, ‘ಹಾಗಲ್ಲ, ಅಂತದ್ದು ಅದೂ ಲಿವರಿಗೆ ಹತ್ತಿದಮೇಲೆ ಆಯ್ತು.’ ‘ಹಾಗಂದರೆ ಹೇಗೆ? ಹೊಸಹೊಸ ತಂತ್ರಜ್ಞಾನ ಬರತಾನೆ ಇರುತ್ತೆ’ ಭರವಸೆಯನ್ನು ದನಿಯಲ್ಲಿ ಧಾರಣ ಮಾಡುತ್ತ ಅವಳ ಕೈ ಮೇಲೆ ಮೆತ್ತಗೆ ಕೈಯಿಟ್ಟ. ‘ಶ್ಯಾಮ, ಲಿಮಿಟೆಡ್ ಓವರ್ ಕ್ರಿಕೆಟ್ ತರಾ ಇದು. ಬ್ಯಾಟರ್ ಅಜೇಯನೆ ಆದ್ರು ಓವರ್ ಮುಗಿದಮೇಲೆ ಎಲ್ಲಾ ಮುಗೀತು. ಮತ್ತೆ ಆಟ ಇಲ್ಲ’ ನಕ್ಕಳು. ಅವನಿಗೆ ಕರುಳು ಮಿಳಿಯಿತು. ಇವಳು ಸೋಲಿನ ಮಾತಾಡಕೂಡದು. ತಾನು ಸಹಿಸಲಾರ. ಅವನ ಮುಖ ನೋಡಿದವಳು, ‘ರೀ... ಏನ್ರೀ ಇದು? ನಾನು ಚನ್ನಾಗೆ ಇದೀನಿ. ನೀವು ಆಫೀಸಿಗೆ ಹೋಗದೆ ಇಲ್ಲಿ ಕೂತರೆ ಹೇಗೆ? ನಡೀರಿ’ ಅಂದಳು ಮುಗುಳ್ನಕ್ಕು. ಅವನಿಗು ಅದೇ ಬೇಕಿತ್ತು; ಅವಳೆದುರು ತನ್ನ ಕಣ್ಣು ನೀರಾಡಬಾರದು. ಎದ್ದ. ಅವಳ ಕಣ್ಣಂಚು ಒದ್ದೆಯಾದ್ದು ಅವನ ಕಣ್ಣಿಗೆ ಬೀಳಲಿಲ್ಲ.

ಆಫೀಸಿಗೆ ಬಂದವನಿಗೆ ಕೆಲಸದೊತ್ತಡ ವಾಸಿನಿ ನಿಭಾಯಿಸುತ್ತಿದ್ದ ಜವಾಬ್ದಾರಿಯನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ಈಗಲೂ ಅಂಜಿಕೆಯಿಲ್ಲ ಅವಳಿಗೆ. ಅವಳ ತಾಯಿ ತೀರಿಕೊಂಡಾಗಲೂ ಮೌನಕ್ಕೆ ಜಾರಿದಳೆ ಹೊರತು ಅಳಲಿಲ್ಲ. ಚಿತೆಗೆ ಅವಳೆ ಅಗ್ನಿಯಿಟ್ಟಳು. ಎರಡು ದಿನವಾಗಿತ್ತು. ಹೊರಗಿಂದ ಬಂದವಳು ಆಸ್ಪತ್ರೆಗೆ ಹೋಗಿದ್ದೆ ಅಂದಳು. ಬ್ಯಾಗಿಂದ ಒಂದು ಕಾಗದ ತೆಗೆದು ತೋರಿಸಿದವಳು, ‘ದೇಹದಾನಕ್ಕೆ ನನ್ನ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಂಡೆ’ ಅನ್ನುತ್ತ ಬಟ್ಟೆ ಬದಲಿಸಲು ಒಳಹೋದಳು. ತಕ್ಷಣ ತಾನು ಮಹಡಿಗೆ ಧಾವಿಸಿದ್ದ. ಮಾವ ತೀರಿಕೊಂಡಾಗಿನ ಅದೇ ಅನುಭವ ಅದೇ ಹಿಂಸೆ. ಆ ಶಬ್ದಕ್ಕಂಟಿಕೊಂಡ ಶಾಪದಂತೆ, ಬುಟ್ಟಿಯಿಂದ ಹೊರಬಂದು ಫೂತ್ಕರಿಸುವ ಹಾವನ್ನು ಮತ್ತೆ ಬುಟ್ಟಿಗೆ ತುರುಕಿ ಮುಚ್ಚಿ ಆಳಕ್ಕೆ ಇನ್ನೂ ಆಳಕ್ಕೆ ತಳ್ಳಿ ಹೊರಬಂದಾಗ ಅವಳು ಅಂಬಾಬಾಯಿಗೆ ಅಡುಗೆಯ ನಿರ್ದೇಶನ ಕೊಡುವುದರಲ್ಲಿ ವ್ಯಸ್ತಳಾಗಿದ್ದಳು. ಇನಕುಲ ಅಮೆರಿಕ ಸೇರಿ ಎರಡು ವರ್ಷವಾಗಿತ್ತು. ಇಂದುಸುತನೂ ರೂರ್ಕೀ ಸೇರಿದ್ದ. ‘ಅಪ್ಪ, ಸದ್ಯ ಇಬ್ರು ಚುರುಕಾಗಿದೀರಿ. ನಾನು